# ವಾಯು ಪಡೆಗೆ ಕೀರ್ತಿಯ ಕಿರೀಟ

ಭಾರತ ಮಹಾರಾಜನ ಅಹಂಕಾರವನ್ನು ಮುರಿದ ಹಿಮಾಲಯ, ಸಾಹಸಿಗಳ 'ಅಹಂಕಾರದ' ಮೆಟ್ಟಿಲಾಗಿದೆ. ಸರ್ ಎಡ್ಮಂಡ್ ಹಿಲರಿ ಮತ್ತು ತೇನಸಿಂಗ್‌ರ ತರುವಾಯ ಈ ಪರ್ವತ ಹಲವು ಬಗೆಯಲ್ಲಿ ಹಲವರ ಸಾಹಸಕ್ಕೆ ಅಖಾಡವಾಗಿದೆ.

ಹಿಮಾಲಯ ಪರ್ವತದ ದಟ್ಟ ಮಂಜಿನ ಕಂದರ, ಕಣಿವೆಯ ಸಂದಿಗೊಂದಿಗಳಲ್ಲಿ ನುಸುಳಿ ಮೌಂಟ್ ಎವರೆಸ್ಟ್ ಶಿಖರದ ಮೇಲೆ ತಮ್ಮ ಸಾಧನೆಯ ಶಾಸನ ಬರೆಯುವ ಕನಸು ಎಲ್ಲರೂ ಕಾಣುತ್ತಾರೆ. ಕೊರೆಯುವ ಚಳಿಗೆ ಮೈಯೊಡ್ಡಿ ನಿದ್ದೆ ನೀರಡಿಕೆಯನ್ನು ದೂರ ಮಾಡಿ ತಮ್ಮ ಕನಸಿಗೆ ಬಣ್ಣ ಕಟ್ಟುವ ಉತ್ಸಾಹಿಗಳು ಮಾತ್ರ ತುಂಬಾ ವಿರಳ. ಹಾಗೆ ನೋಡಿದರೆ ಇತ್ತೀಚೆಗೆ ಯಶಸ್ಸಿನ ದಿಗ್ವಿಜಯ ಸಾಧಿಸಲು ಬದುಕನ್ನು ಪಣಕ್ಕಿಟ್ಟು ಮನ್ನುಗ್ಗಿದವರು ಸಾಲು ಸಾಲು.

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಯುವಕರಿಬ್ಬರು ದೇಶವನ್ನು ಸೈಕಲ್‌ನಲ್ಲಿ ಪರ್ಯಟನೆ ಮಾಡಿ ಜಗತ್ತಿನ ಅತ್ಯಂತ ಎತ್ತರದ ಶಿಖರದ ಮೇಲೆ ಕನ್ನಡದ ಬಾವುಟ ಹಾರಿಸ ಹೊರಟಿದ್ದರು. ಹಿಮದ ತಪ್ಪಲು ತಲುಪುವಷ್ಟರಲ್ಲಿ ಹೈರಾಣಾಗಿ ಹೋಗಿದ್ದ ಅವರಲ್ಲಿ ಮುನಿರಾಜು ಸುಸ್ತಾಗಿ ತನ್ನ ಸಾಹಸಗಾಥೆಗೆ ಬೆನ್ನು ತೋರಿಸಿ ನಿಂತೇ ಬಿಟ್ಟರು. ಅವರ ಉತ್ಸಾಹಕ್ಕೆ ಕಾಲು ಮೇಲೇಳಲೇ ಇಲ್ಲ. ಆದರೆ, ಮೋಹನ್ ದೇಹಬಾಧೆ ಯನ್ನು ಲೆಕ್ಕಿಸದೆ ಮುನ್ನುಗ್ಗಿದರು. 20 ದಿನ ಕಳೆದರೂ ಮರಳಿ ಬರಲಿಲ್ಲ. ಕಂಗಾಲಾದ ಮುನಿರಾಜು ಅಲೆದಲೆದು ಗೆಳೆಯನನ್ನು ಕಂಬನಿಯ ಬಿಂಬದಲ್ಲಿ ಕಾಣುವ ತವಕ ತೋರಿದರು. ಕೊನೆಗೂ ಆತ ಕಾಣೆಯಾಗಿದ್ದಾನೆ ಎಂಬ ಸಂದೇಹದಲ್ಲಿ ಊರತ್ತ ಮುಖ ಮಾಡುವ ಪರಿಸ್ಥಿತಿ ಎದುರಾಯಿತು. ಇಂತಹ ನೋವಿನ, ವಿಷಾದದ ನಡುವೆಯೂ ಛಲಗಾರರು ತಮ್ಮ ಎದೆಗಾರಿಕೆ ಯಿಂದ ಇಲ್ಲಿ ಕೀರ್ತಿಯ ಪತಾಕೆಯನ್ನು ಹಾರಿಸಿದ್ದಾರೆ.


ನಿವೇದಿತಾ

ಒಂದೆಡೆ ನೇಪಾಳದ ಧಾರ್ಮಿಕ ಮುಖಂಡ 30ರ ಹರೆಯದ ಗುರು ಭಕ್ತ ಕುಮಾರ್ ರೈ ಎನ್ನುವಾತ ನಿರಂತರ 32 ಗಂಟೆಗಳ ಕಾಲ ಎವರೆಸ್ಟ್ ಶಿಖರದಲ್ಲಿ ಧ್ಯಾನ ಮಾಡಿ ವಿಶ್ವಶಾಂತಿಯನ್ನು ಕೋರಿದ್ದಾರೆ. ಈ ಮೂಲಕ ಅವರು ವಿಶ್ವ ದಾಖಲೆಗೆ ಮುನ್ನುಡಿಯನ್ನೂ ಬರೆದಿದ್ದಾರೆ. ಅಷ್ಟು ದೀರ್ಘಕಾಲ ಅಲ್ಲಿ ಕಾಲ ಕಳೆದ ಮತ್ತೊಬ್ಬರಿಲ್ಲ ಎಂಬ ಕೀರ್ತಿ ಅವರ ಬೆನ್ನಿಗಿದೆ.

ಅಂತೆಯೇ ಭಾರತೀಯ ವಾಯುಪಡೆಯ ಮೂವರು ಮಹಿಳಾ ಅಧಿಕಾರಿಗಳು ಸೇರಿದಂತೆ 11 ಮಂದಿಯ ತಂಡ 8848 ಮೀಟರ್ ಎತ್ತರದ ಹಿಮಾಲಯದ ಅತ್ಯುಚ್ಚ ಶಿಖರವಾದ ಎವರೆಸ್ಟ್ ಮೇಲೆ ತಮ್ಮ ಹೆಜ್ಜೆಗಳನ್ನು ಊರುವ ಮೂಲಕ ಮತ್ತೊಂದು ಬಗೆಯ ದಾಖಲೆಯನ್ನು ಬರೆದಿದ್ದಾರೆ. ಇವರ ತಂಡದಲ್ಲಿ ಒಬ್ಬ ವೈದ್ಯರೂ ಇದ್ದರು.


ರಾಜಿಕಾ


ನಿರುಪಮಾ

ಹಕ್ಕಿಯಂತೆ ಹಾರಾಡಿ ದೇಶ ರಕ್ಷಣೆಗೆಂದು ಮೀಸಲಾದ ಈ ಅಧಿಕಾರಿಗಳು ತಮ್ಮ ಯಶಸ್ಸಿನ ರೆಕ್ಕೆಯನ್ನು ಬಿಚ್ಚಿ ಎವರೆಸ್ಟ್ ಏರುವ ಮೂಲಕ ಸೇನಾ ಪಡೆಯಲ್ಲಿಯೇ ಮೊದಲಿಗರಾಗಿದ್ದಾರೆ. ಭಾರತೀಯ ವಾಯುಪಡೆಯ (ಐಎಎಫ್) ಇತಿಹಾಸದಲ್ಲಿಯೇ ಇದು ದಿಟ್ಟ ಹೆಜ್ಜೆ ಎಂದು ಸೇನಾಪಡೆ ಹೆಮ್ಮೆಯಿಂದ ಹೇಳಿಕೊಂಡಿದೆ. ಫ್ಲೈಟ್ ಲೆಫ್ಟಿನೆಂಟ್ ನಿವೇದಿತಾ ಚೌಧರಿ ಅವರು ಮೇ 21ರಂದು ಎವರೆಸ್ಟ್ ಪರ್ವತವೇರಿದ ಸಾಧನೆ ಮಾಡಿದ್ದರೆ, ಸ್ಕ್ವಾಡ್ರನ್ ನಾಯಕಿ ನಿರೂಪಮಾ ಪಾಂಡೆ ಮತ್ತು ಫ್ಲೈಟ್ ಲೆಫ್ಟಿನೆಂಟ್ ರಜಿಕಾ ಶರ್ಮಾ ಮೇ 25 ರಂದು ಪರ್ವತದ ತುದಿಯಲ್ಲಿ ನಿಂತು ತಮ್ಮ ಸೇನೆಯ ಆಕಾಶ ನೀಲಿ ಬಣ್ಣವನ್ನು ಹಿಮ ಗಗನದಲ್ಲಿ ಲೀನ ಮಾಡಿದ್ದಾರೆ.

ಪರ್ವತಾರೋಹಿ ವಾಯುಪಡೆಯ ಮೊದಲ ಮಹಿಳೆ ಎಂಬ ಕೀರ್ತಿಗೆ ಚೌಧರಿ ಭಾಜನರಾಗಿದ್ದಾರೆ. ಅವರ ಅಧೀನದಲ್ಲಿ ಕಾರ್ಪೊರಲ್ ಆಗಿ ಕಾರ್ಯ ನಿರ್ವಹಿಸುವ ರಾಜು ಸಿಂಧು ಪರ್ವತವನ್ನು ಏರಿದ ಎರಡನೇ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ. ಸಿಂಧು ಮೂಲತಃ ಹರಿಯಾಣದವರು. ಪಾಂಡೆ ಮತ್ತು ಶರ್ಮಾ ಅವರು ತಮ್ಮ ತಂಡದ ಜೊತೆ ಸೇರಿ ಎರಡನೇ ಹಂತದಲ್ಲಿ ಎವರೆಸ್ಟ್ ಶಿಖರವನ್ನೇರಿದ್ದಾರೆ. ಈ ಉದ್ದೇಶಕ್ಕಾಗಿಯೇ ಈ ತಂಡಕ್ಕೆ ಹಿಮದ ತಪ್ಪಲಿನ ಭಯಾನಕ ಚಳಿಯಲ್ಲಿ ನಿರಂತರ 2 ವರ್ಷ ಪರ್ವತಾರೋಹಣದ ಶಿಕ್ಷಣ ನೀಡಲಾಗಿತ್ತು. ನಿರಂತರ ಅಭ್ಯಾಸ ಹಾಗೂ ಹಠಕ್ಕೆ ಬಿದ್ದು ನಡೆಸಿದ ತಾಲೀಮು ಇಂದು ಅವರ ಕೈಯನ್ನು ಹಿಡಿದು ಮೇಲಕ್ಕೆತ್ತಿದೆ. ಯಶಸ್ಸಿನ ಕೀರ್ತಿಗೆ ಮುಕುಟವನ್ನು ತಂದು ಮುಡಿಸಿದೆ.

27 ವರ್ಷದ ಉತ್ಸಾಹಿ ಯುವತಿ ನಿವೇದಿತಾ ಚೌಧರಿ ಅವರು ರಾಜಸ್ಥಾನ ಮೂಲದವರು. ತಂದೆ ಪ್ರಭಾಕರ್ ಸಿಂಗ್ ತಾಯಿ ಕಮಲಾ ದೇವಿ. ದೀಪಿಕಾ ಎಂಬ ಸಹೋದರಿ ಒಬ್ಬಳಿದ್ದಾರೆ. ಮಧ್ಯಮ ವರ್ಗದಲ್ಲಿ ಹುಟ್ಟಿದ ಚೌಧರಿ ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ಹುಡುಗಿ. ಪ್ರತಿಭಾವಂತ ವಿದ್ಯಾರ್ಥಿನಿಯಾಗಿದ್ದ ಈಕೆ ಧೈರ್ಯಶಾಲಿಯೂ ಹೌದು. ಎಂಜಿನಿಯರಿಂಗ್ ಪದವಿ ಪಡೆದ ನಂತರ ಸೇನೆಗೆ ಸೇರಿದರು. ಕಳೆದ ನಾಲ್ಕು ವರ್ಷದಿಂದ ವಾಯು ಪಡೆಯಲ್ಲಿ ಲೆಫ್ಟಿನೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆ. ತನ್ನ ಎಲ್ಲ ಸಾಧನೆಗೂ ತಂದೆಯ ಔದಾರ್ಯ ಹಾಗೂ ತ್ಯಾಗವೇ ಕಾರಣ ಎಂದು ತನ್ನ ತಂದೆಯನ್ನು ಪ್ರಶಂಸಿಸುತ್ತಾರೆ ಅವರು.

31 ವರ್ಷದ ಸ್ಕ್ವಾಡ್ರನ್ ಲೀಡರ್ ನಿರುಪಮಾ ಪಾಂಡೆ ಅವರು ಬಿಹಾರ ಮೂಲದವರು. 28ರ ಪ್ರಾಯದ ಫ್ಲೈಟ್ ಲೆಫ್ಟಿನೆಂಟ್ ರಜಿಕಾ ಶರ್ಮಾ ಹಿಮಾಚಲ ಪ್ರದೇಶದವರು.

■ ರಾಘು






ಹೊಸದಾಗಿ ಕಂಡುಹಿಡಿದಿರುವ ನಮ್ಮ ಔಷಧಿಯನ್ನು ಹಚ್ಚಿದ ನಂತರ 6-8 ಗಂಟೆಗಳ ಒಳಗೆ ನಿಮ್ಮ ಮಚ್ಚೆಗಳ ಬಣ್ಣ ಬದಲಾಗಲು ಪ್ರಾರಂಭವಾಗುವುದು. ನಿಮ್ಮ ತ್ವಚೆಯು ಶಾಶ್ವತವಾಗಿ ವಾಸ್ತವಿಕ ಬಣ್ಣವನ್ನು ಪಡೆಯುವುದು. 100% ಭರವಸೆಯುಳ್ಳ ಚಿಕಿತ್ಸೆ. ಸಂಪೂರ್ಣ ಚಿಕಿತ್ಸೆಗಾಗಿ ಇಂದೇ ಸಂಪರ್ಕಿಸಿ. ದರ ರೂ. 525/-, 840/, 1260/-. ಯಾವುದೇ ರೀತಿಯ ಪ್ರಯೋಜನವಾಗದಿದ್ದರೆ ಹಣ ವಾಪಸ್ಸು ಕೊಡಲಾಗುವುದು



ಚರ್ಮದ ಕಾಯಿಲೆ

100% ಖಾತರಿಯಾದ ಚಿಕಿತ್ಸೆ

ನಿಮ್ಮ ದೇಹದಲ್ಲಿ ಬೂದು, ಕಪ್ಪು, ಬಿಳಿ, ಕೆಂಪು ಅಥವಾ ಯಾವುದೇ ರೀತಿಯ ಮಚ್ಚೆಗಳಿರುವವೇ? ವಾಸಿಯಾಗದಿರುವ ಇಸುಬು ಅಥವಾ ಬಿಳಿ ಪೊರೆಯುಳ್ಳ ಕೆಂಪು ಮಚ್ಚೆ ಅಥವಾ ಉರಿತವುಳ್ಳ ಯಾವುದೇ ರೀತಿಯ ಹುಣ್ಣುಗಳ ನಿವಾರಣೆ ಚಿಕಿತ್ಸೆಗಾಗಿ ಇಂದೇ ಬರೆಯಿರಿ ಅಥವಾ ತಕ್ಷಣ ಸಂಪರ್ಕಿಸಿ. ದರ ರೂ. 400-1300/-ರ ನಡುವೆ

ಪೈಲ್ಸ್‌ಗೆ ಚಿಕಿತ್ಸೆ

ನಮ್ಮ ಚಿಕಿತ್ಸೆಯು ಎಲ್ಲಾ ರೀತಿಯ ಪೈಲ್ಸ್‌ಗೆ ಪರಿಣಾಮಕಾರಿಯಾಗಿದೆ ಮತ್ತು ಮೂಲದಿಂದಲೇ ಅದನ್ನು ಗುಣಪಡಿಸುತ್ತದೆ. ರಕ್ತ ಸ್ರಾವವನ್ನು ನಿಲ್ಲಿಸುತ್ತದೆ ಮತ್ತು ಹುಣ್ಣನ್ನು ಸಂಪೂರ್ಣವಾಗಿ ಒಣಗಿಸುತ್ತದೆ. ತಕ್ಷಣ ಕರೆಮಾಡಿ ಅಥವಾ ಬರೆಯಿರಿ. ರೂ. 525/-, 840/-

ಹೊಟ್ಟೆಗೆ ಸಂಬಂಧಿಸಿದ ಕಾಯಿಲೆಗಳು

ಹೊಸದಾಗಿ ಕಂಡುಹಿಡಿದಿರುವ ನಮ್ಮ ಔಷಧಿಯು ಬಹುದಿನದ ಗ್ಯಾಸ್ಟ್ರಿಕ್, ಆಮ್ಲತೆ, ಆಯಾಸ, ಅಸೌಖ್ಯ, ಮೂತ್ರವಿಸರ್ಜನೆ ಮಾಡಿದಾಗ ಉರಿ ಕಾಣಿಸಿ ಕೊಳ್ಳುವಿಕೆ, ತೊಂದರೆಗಳಿಗೆ ಮೂಲ ಕಾರಣಕ್ಕೆ ಚಿಕಿತ್ಸೆ ನೀಡಿ ಗುಣಪಡಿಸುವುದು. ಈ ತೊಂದರೆಗಳಿಂದ ವ್ಯಾಕುಲಗೊಂಡಿರುವ ರೋಗಿಗಳು 100% ಖಾತರಿಯಾದ ಚಿಕಿತ್ಸೆಗಾಗಿ ಮುಖ್ಯ ವೈದ್ಯರಿಯವರಿಗೆ ಬರೆಯಿರಿ ಅಥವಾ ನೇರವಾಗಿ ಸಂಪರ್ಕಿಸಿ. (24 ಗಂಟೆಗಳ ಒಳಗೆ ಸೌಖ್ಯದ ಸಮಾಧಾನ ದೊರೆಯುವ ಖಾತರಿಯಿರುವುದು) ರೂ. 525/-, 840/-

ಸಲಹೆ: ಕಾಯಿಲೆಗೆ ಅನುಗುಣವಾಗಿ ನಾವು ಸಾಂಪ್ರದಾಯಿಕ ಗಿಡಮೂಲಿಕೆಗಳನ್ನು ಉಪಯೋಗಿಸಿ ಔಷಧಿ ಸಿದ್ಧಪಡಿಸುವೆವು. ರೋಗಿಗಳಿಗೆ 100% ರೋಗ ಗುಣಪಡಿಸುವ ಖಾತರಿ ನೀಡುವೆವು.

09709639980
09473386840
09931483122

ಔಷಧಿ ಖರೀದಿಸುವ ಮುನ್ನ ವಿಶ್ವಾಸಾರ್ಹ ವೈದ್ಯರಾಜ್ ಅಶ್ವನಿಕುಮಾರ್ ಅವರ ಹೆಸರು ಮತ್ತು ವಿಳಾಸ ನೋಡಿ ಖಾತರಿಮಾಡಿಕೊಳ್ಳಿ